ಒ.ಎಸ್. ನಂ.143/2016
ಪಿಡಬ್ಲು-1

ಮಧ್ಯಂತರ ಅರ್ಜಿ ಆದೇಶ ಸಂ.11 ರ ಮೇಲೆ ಆದಂತಹ ಆದೇಶದ ಮೇರೆಗೆ ದಿನಾಂಕ 20.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

37-ವರ್ಷಗಳ ಹಿಂದೆ ಬಿರಾಳ ಹಿಸ್ಸಾ ಗ್ರಾಮದಲ್ಲಿ ಖರೀದಿ ಕರಾರು ಪತ್ರ ಬರೆದಿರುತ್ತಾರೆ. ಗೌಡರ ಶರಣಪ್ಪ ಮತ್ತು ಇತರರು ನಡುವೆ ವ್ಯವಹಾರ ಆಗಿರುತ್ತದೆ. ರೂ.10,400/- ಗಳನ್ನು ತಮ್ಮಣ್ಣ ಬನಕಾರ ಇರವರಿಗೆ ಕೊಟ್ಟಿರುತ್ತೇನೆ. ನಾನು ಕೊಟ್ಟ ಹಣದ ಮುಖಬೆಲೆ ನನಗೆ ನೆನಪಿಲ್ಲ. ಸದರಿ ವಿಚಾರವಾವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ನಾನು ಹಣ ನೀಡಿದ ನಂತರ ರಸೀದಿಯನ್ನು ಬರೆಸಿಕೊಂಡಿರುತ್ತೇನೆ ಸದರಿ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವಿಚಾರವಾವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ನಾನು ಸದರಿ ದಾವಾಸ್ತಿಯನ್ನು ಪ್ರತಿವಾದಿಯರು ಬೇರೆಯವರಿಗೆ ಅಡಮಾನ ಮಾಡಿರುವುದರಿಂದ ಈ ದಾವೆ ಸಲ್ಲಿಸಿರುತ್ತೇನೆ. 1ನೆ ಪ್ರತಿವಾದಿಯು 2ನೆ ಪ್ರತಿವಾದಿಗೆ ದಾವಾಸ್ತಿ ಅಡಮಾನ ಮಾಡಿಕೊಟ್ಟಿರುತ್ತಾನೆ ಎಂದರೆ ಸಾಕ್ಷಿ ಹೇಗೆ ಮಾಡಿಕೊಟ್ಟಿರುತ್ತಾರೆ ಎಂದು ಉತ್ತರ ನೀಡಿರುತ್ತೇನೆ. 1ನೆ ಪ್ರತಿವಾದಿಗೆ ಪ್ರಾಪಂಚಿಕ ಅಡಚಣೆಗೋಸ್ಕರ 2ನೆ ಪ್ರತಿವಾದಿಗೆ ದಾವಾಸ್ತಿ ಅಡಮಾನ ಮಾಡಿಕೊಟ್ಟಿರುತ್ತಾನೆ ಎಂದರೆ ಸಾಕ್ಷಿ ನನಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾನೆ ಎಂದು ಹೇಳುತ್ತಾರೆ. ತಮ್ಮಣ್ಣ ಜೀವಂತವಿರುವಾಗ ಖರೀದಿ ಪತ್ರ ನೊಂದಣೆ ಮಾಡಿಸುವಂತೆ ನಾನು ಕೇಳಿರುತ್ತೇನೆ. ಸದರಿ ವಿಚಾರವಾವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ನಾನು ಈ ದಾವೆಯನ್ನು ದಾಖಲಿಸಲು ಮಾಹಿತಿಯನ್ನು ನಾನೆ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಪ್ರಸ್ತುತವಾಗಿ ನಾವೆ ದಾವಾಸ್ತಿಯನ್ನು ಸಾಗುವಳಿ ಮಾಡುತ್ತೇವೆ. ದಾವಾಸ್ತಿಯ ಪಹಣಿಗಳು 3ನೆ ಪ್ರತಿವಾದಿಯ ಹೆಸರಿನಲ್ಲಿರುತ್ತವೆ ಎಂದರೆ ಸರಿ. ಪ್ರಸ್ತುತವಾಗಿ 3ನೆ ಪ್ರತಿವಾದಿಯೆ ಸಾಗುವಳಿ ಮಾಡುತ್ತಾಳೆ ಎಂದರೆ ಸರಿ. ನಾನು ಖರೀದಿ ಪತ್ರ ಬರೆಯುವ ಸಮಯದಲ್ಲಿ ಪೂರ್ಣ ಖರೀದಿ ಹಣ ನೀಡಿರುತ್ತೇನೆ. ನಾನು ಇನ್ನು ಳಿದ ಖರೀದಿ ಹಣ ಬಾಕಿ ಇದ್ದು ಅದನ್ನು ನೊಂದಣೆ ಸಮಯದಲ್ಲಿ ಕೊಡುತ್ತೇನೆ ಎಂದು ಈ ದಾವೆಯನ್ನು ದಾಖಲಿಸಿರುತ್ತೀರಾ ಎಂದರೆ ದಾವೆಯನ್ನು ದಾಖಲಿಸಿಲ್ಲ ಎಂದು ಹೇಳುತ್ತಾರೆ. ತಮ್ಮಣ್ಣ ನನಗೆ ಖೀರಿದಿ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

37-ವರ್ಷಗಳಿಂದ ಪ್ರಸ್ತುತವಾಗಿ ನೊಂದಾಯಿತ ಖರೀದಿ ಪತ್ರ ಮಾಡಿಕೊಳ್ಳಲು

ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಭೀಮರಾಯ ಬೆಂಗಳೂರಿಗೆ ಹೋಗಿರುತ್ತಾನೆ ಎಂದು ಹೇಳುತ್ತಾರೆ. ನಾನು ದಾವಾಸ್ತಿ ಕಬ್ಜೆಯಲ್ಲಿರದ ಕಾರಣ ದಾವಾಸ್ತಿಯ ಕಬ್ಜೆ ಬೇಕೆಂದು ನಿಮ್ಮ ವಕೀಲರು ದಾವೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಗೆ ಭೀಮರಾಯ ಮಾಲಿಕನಿದ್ದು ತನ್ನ ಪ್ರಾಪಂಚಿಕ ಅಡಚಣೆಗಾಗಿ 2ನೆ ಪ್ರತಿವಾದಿಗೆ ಅಡಮಾನ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಭೀಮರಾಯನು ಶಂಕ್ರೆಪ್ಪನಿಗೆ ಅಡಮಾನ ಮಾಡುವಾಗ ನನ್ನ ಅಣ್ಣ ಅಂಬಾರಾಯ ಮತ್ತು ಹನೀಪರವರಿಗೆ ಕೇಳಿರುತ್ತಾರೆ ಎಂದರೆ ಸಾಕ್ಷಿ ನನಗೆ ಕೇಳಿರುವುದಿಲ್ಲ ಎಂದು ಹೇಳುತ್ತಾರೆ. ದಾವಾಸ್ತಿಯನ್ನು ಸರ್ವೆ ಮಾಡುವಾಗ ನನಗೆ ಯಾವುದೆ ನೋಟಿಸು ನೀಡಿರುವುದಿಲ್ಲ. ಭೀಮರಾಯನು ಶಂಕ್ರೆಪ್ಪನಿಗೆ ಅಡಮಾನ ಮಾಡುವಾಗ ನನಗೆ ಅಡಮಾನದ ಕುರಿತು ವಿಚಾರ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. 28-ವರ್ಷಗಳಿಂದ ಪ್ರತಿವಾದಿಯರೆ ಕಬ್ಜೆಯಲ್ಲಿರುತ್ತಾರೆ ಎಂದರೆ ಸಾಕ್ಷಿ ಈ ವರ್ಷ ಕಬ್ಜೆಯಲ್ಲಿರುತ್ತಾರೆ ಎಂದು ಹೇಳುತ್ತಾರೆ. ಸುಳ್ಳು ಖರೀದಿ ಪತ್ರವನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ

ಒ.ಎಸ್. ನಂ.143/2016
ಪಿಡಬ್ಲು-1

ಮಧ್ಯಂತರ ಅರ್ಜಿ ಆದೇಶ ಸಂ.11 ರ ಮೇಲೆ ಆದಂತಹ ಆದೇಶದ ಮೇರೆಗೆ ದಿನಾಂಕ 20.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ</u>

ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿರುತ್ತಾರೆ.

ಖರೀದಿ ಪತ್ರದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಆದ್ದರಿಂದ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ